**<u>ಅಸಲು ದಾವೆ ಸಂಖ್ಯೆ.160/2018</u>**

ಡಿ.ಡಬ್ಲ್ಯೂ:1

**ದಿನಾಂಕ:14-06-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎನ್.ಜಿ. ವಕೀಲರಿಂದಃ-</u>**

ನಾವು ವಾದಿ ಕುಟುಂಬದಿಂದ 1996 ನೇ ಸಾಲಿನಲ್ಲಿ ಆಸ್ತಿಯನ್ನು ನನ್ನ ತಂದೆ ಮಹದೇವಪ್ಪ ರವರ ಹೆಸರಿನಲ್ಲಿ ಖರೀದಿ ಮಾಡಿರುತ್ತೇವೆ. ವಾದಿಯರ ದಾವಾ ಆಸ್ತಿ ನಮ್ಮ ಆಸ್ತಿಯ ಉತ್ತರ ಭಾಗಕ್ಕೆ ಬರುತ್ತದೆ. ವಾದಿಯರು ಹಾಜರುಪಡಿಸಿರುವ ದಾಖಲೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯಲ್ಲಿ ರಸ್ತೆ ಮತ್ತು ಕಾಲುವೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ರಸ್ತೆ ಮತ್ತು ಕಾಲುವೆಯನ್ನು ಹೊರತುಪಡಿಸಿ ವಾದಿಯ ಹೆಸರಿನಲ್ಲಿ ಇಪ್ಪತೆಂಟುವರೆ ಗುಂಟೆ ಆಸ್ತಿ ಖಾತೆ ಇರುತ್ತದೆ. ವಾದಿಗೆ ಸೇರಿದ ಇಪ್ಪತ್ತೆಂಟುವರೆ ಗುಂಟೆ ಆಸ್ತಿಯ ಮೇಲೆ ನನಗೆ ಮತ್ತು ನನ್ನ ಕುಟುಂಬಕ್ಕೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ.

2. ನಾವು ನಮ್ಮ ಆಸ್ತಿಯನ್ನು ಖರೀದಿ ಮಾಡಿದ ನಂತರ ಸದರಿ ಆಸ್ತಿಗೆ ಹದ್ದುಬಸ್ತು ಮಾಡಿಸಿರುವುದಿಲ್ಲ. 2018 ನೇ ಸಾಲಿನಲ್ಲಿ ವಾದಿಗೆ ಸೇರಿದ 4 ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನಮ್ಮ ಕ್ರಯಪತ್ರದಲ್ಲಿ ವಾದಿಯ ದಾವಾ ಆಸ್ತಿಯಲ್ಲಿ ರಸ್ತೆ ಇರುವ ಬಗ್ಗೆ ನಮೂದು ಇರುವುದಿಲ್ಲ. ವಾದಿಯರು ನನ್ನನ್ನು ಒತ್ತುವರಿ ಮಾಡಿರುವ ಆಸ್ತಿಯನ್ನು ಬಿಟ್ಟುಕೊಡುವಂತೆ ಕೇಳಿರುತ್ತಾರೆ ಎಂದರೆ, ಸಾಕ್ಷಿಯು ನಾವು ಒತ್ತುವರಿ ಮಾಡಿರುವುದಿಲ್ಲ, ಕಾರಣ ಬಿಟ್ಟು ಕೊಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಜಮೀನಿಗೆ ಹೋಗಬೇಕಾದರೆ ವಾದಿಯ ಜಮೀನಿನ ಮೂಲಕ ಹೋಗುವ ಅವಶ್ಯಕತೆ ಇರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿರುವ ವಿಚಾರಗಳನ್ನು ನಾನೇ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

ಸಹಿ/-
ಐ/ಸಿ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.